## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 232 (191) |
| 2) ಸದಸ್ಯರ ಹೆಸರು | : | ಶ್ರೀ ಶಿವಣ್ಣ ಬಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3) ಉತ್ತರಿಸಬೇಕಾದ ದಿನಾಂಕ: | : | 18.08.2026 |
| 4) ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ದೆಹಲಿ ಎನ್‌ಸಿಆರ್ ಮಾದರಿಯಲ್ಲಿ ಬೆಂಗಳೂರನ್ನು ನೆರೆಯ ನಗರಗಳಾದ ತುಮಕೂರು ಮೈಸೂರು ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಸಂಪರ್ಕಿಸಲು ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆ (RRTS) ಮಾದರಿಯ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವ ಪ್ರಾಸ್ತಾವನೆಯೂ ಸರ್ಕಾರದ ಮುಂದಿದೆಯೇ; | ಪ್ರಸ್ತುತ, ಬೆಂಗಳೂರು ನಗರವನ್ನು ಮೈಸೂರು, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರದಂತಹ ನೆರೆಯ ನಗರಗಳೊಂದಿಗೆ ಸಂಪರ್ಕಿಸುವ ಯಾವುದೇ ಅನುಮೋದಿತ ಅಥವಾ ಕಾರ್ಯನಿರ್ವಹಿಸುವ RRTS ಕಾರಿಡಾರ್‌ಗಳನ್ನು ಸರ್ಕಾರದಿಂದ ರೂಪಿಸಿರುವುದಿಲ್ಲ. |
| (ಆ) | ಬೆಂಗಳೂರು ಉಪನಗರ ರೈಲು ಯೋಜನೆಗೆ (BSRP) ಮತ್ತು ಈ ಉದ್ದೇಶಿತ ಕ್ಷಿಪ್ರ ಸಾರಿಗೆ ವ್ಯವಸ್ಥೆಗಳ ನಡುವೆ ಸಮನ್ವಯ ಸಾಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಯೋಜನೆಗಳ ಪ್ರಸ್ತುತ ಕಾರ್ಯಸಾಧ್ಯತ ವರದಿಯ (Feasibility Report) ಸ್ಥಿತಿ ಏನು; | ಈ ಸಂಬಂಧ ಯಾವುದೇ ಕಾರ್ಯಸಾಧ್ಯತಾ ಅಧ್ಯಯನವನ್ನು ನಡೆಸಲಾಗಿರುವುದಿಲ್ಲ. |
| (ಇ) | ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಉಪನಗರಗಳ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವ ಇಂತಹ ಹೈ ಸ್ಪೀಡ್ ರೈಲು ಕಾರ್ಡಾರ್ಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ಅಥವಾ ರಾಷ್ಟ್ರೀಯ ರಾಜಧಾನಿ ವಲಯ ಸಾರಿಗೆ ನಿಗಮದೊಂದಿಗೆ (NCRTC ಸಮಾಲೋಚನೆ ನಡೆಸಲಾಗಿದೆಯೇ: | ಸರ್ಕಾರದ ನೋಡೆಲ್ ಏಜೆನ್ಸಿಯಾಗಿರುವ ಕೆ-ರೈಡ್ ವತಿಯಿಂದ ಈ ಸಂಬಂಧ ಯಾವುದೇ ಸಮಾಲೋಚನೆ ನಡೆದಿರುವುದಿಲ್ಲ. ಆದಾಗ್ಯೂ, ಕೆ-ರೈಡ್ ಅಧಿಕಾರಿಗಳು NCRTC ಯೋಜನೆಗೆ ಭೇಟಿ ನೀಡಿದ್ದು, ಅಲ್ಲಿನ ವ್ಯವಸ್ಥೆಗಳು ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಉತ್ತಮ ಅರಿವಿದೆ ಎಂಬುದಾಗಿ ವರದಿ ನೀಡಿರುತ್ತಾರೆ. |
| (ಈ) | ಮುಂದಿನ ಐದು ವರ್ಷಗಳಲ್ಲಿ ಈ ಯೋಜನೆಯ ಭೂಸ್ವಾಧೀನ ಮತ್ತು ಹಣಕಾಸು ಕ್ರೂಢಿಕರಣಕ್ಕಾಗಿ ಸರ್ಕಾರ ರೂಪಿಸಿರುವ ನೀಲ ನಕ್ಷೆ (Blueprint) ಏನು? (ವಿವರ ನೀಡುವುದು) | ಉಪನಗರ ರೈಲು ಯೋಜನೆಯು ETCS ಸಿಗ್ನಲಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ; ಇದೇ ವ್ಯವಸ್ಥೆಯನ್ನು ಮೀರತ್-ದೆಹಲಿ RRTS ಯೋಜನೆಗಾಗಿ RRTS ಕೂಡ ಅಳವಡಿಸಿಕೊಂಡಿದೆ.ಭವಿಷ್ಯದ ವಿಸ್ತರಣೆಯ ಸಂದರ್ಭದಲ್ಲಿ ಕೆ-ರೈಡ್ ನ ಉಪ ನಗರ ರೈಲು ಜಾಲವು RRTS ವ್ಯವಸ್ಥೆಗೆ ಪೂರಕವಾಗುವ ಸಾಧ್ಯತೆ ಇರುತ್ತದೆ. |

ಸಂಖ್ಯೆ: ಮೂಅಇ 252 ರಾರಾಹೆ 2026

**(ಎಂ.ಬಿ ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.